**ಸಾಕ್ಷಿಯನ್ನು ದಿನಾಂಕಃ 11-07-2024 ರಂದು ಕರೆಯಿಸಿ ಪ್ರಮಾಣ ವಚನ ನೀಡಲಾಯಿತು.**

**ಮುಂದುವರೆದ ಪಾಟೀ ಸವಾಲು ಪ್ರತಿವಾದಿ ಪರ ವಕೀಲರವರಿಂದಃ**

ನನ್ನ ಗಂಡ ಅಂಜಿನಪ್ಪ ಇವರು ಹಾಗೂ ಜಯಪ್ಪ ದಾವಾ ಆಸ್ತಿ ನಮಗೆ ಸೇರಿದ್ದು ಎಂದು ಹೊಳೆಯಪ್ಪ ಮತ್ತು ಸಿದ್ದರಾಮಪ್ಪರವರ ವಿರುದ್ದ ಈ ದಾವೆಯನ್ನು ಹಾಕಿರುವರು. ನನಗೆ ದಾವಾ ಆಸ್ತಿಯ ಸರ್ವೆ ನಂಬರ್ ಹಾಗೂ ಚೆಕ್ಕುಬಂದಿ ಹೇಳಲು ಬರುವುದಿಲ್ಲ. ಅಂಜಿನಪ್ಪನ ತಂದೆಯ ಹೆಸರು ಹನುಮಂತಪ್ಪ. ಹನುಮಂತಪ್ಪನ ತಂದೆಯ ಹೆಸರು ನನಗೆ ಗೊತ್ತಿಲ್ಲ. ದಾವಾ ಆಸ್ತಿಯ ಮೂಲ ಪುರುಷ ಯಾರು ಎಂದು ನನಗೆ ಗೊತ್ತಿರುವುದಿಲ್ಲ. ಅಂಜಿನಪ್ಪನ ಪತ್ನಿಯ ಹೆಸರು ಮಂಜಮ್ಮ ಎಂದರೆ ಸರಿ. ಸಾಕ್ಷಿಯು ನಾನು ಅಂಜಿನಪ್ಪನ 2 ನೇ ಹೆಂಡತಿ ಎಂದು ನುಡಿದರು. ಮಂಜಮ್ಮನನ್ನು ಈ ದಾವೆಯಲ್ಲಿ ಸೇರಿಸಿರುವುದಿಲ್ಲ. ವಂಶವೃಕ್ಷದಲ್ಲಿ ಮಂಜಮ್ಮನನ್ನು ಕಾಣಿಸಿರುವುದಿಲ್ಲ ಎಂದರೆ ನನಗೆ ಗೊತ್ತಿಲ್ಲ. ಅದರಲ್ಲಿ ನನ್ನ ಹೆಸರು ಕೂಡ ಇರುವುದಿಲ್ಲ ಎಂದರೆ ನನಗೆ ಗೊತ್ತಿಲ್ಲ. ನಾನು ಅಂಜಿನಪ್ಪನ ಪತ್ನಿಯಾಗಿರುವುದಿಲ್ಲ ಎಂದರೆ ಸರಿಯಲ್ಲ. ನನಗೂ ದಾವಾ ಆಸ್ತಿಗೂ ಸಂಬಂಧ ಇಲ್ಲ ಎಂದರೆ ಸರಿಯಲ್ಲ.

ದಾವಾ ಆಸ್ತಿಯ ಮೂಲ ಪುರುಷನ ಹೆಸರು ಸಕ್ರಿ ಉಚ್ಚೆಂಗಪ್ಪ ಎಂದರೆ ಸರಿ. ಆತನಿಗೆ ಸಕ್ರಿ ಗಂಗಪ್ಪ ಮತ್ತು ಸಕ್ರಿ ಪರಸಪ್ಪ ಎಂಬ ಇಬ್ಬರು ಮಕ್ಕಳು ಎಂದರೆ ಸರಿ. ಸದರಿ ಇಬ್ಬರೂ ಮಕ್ಕಳು ಬಹಳ ದಿನಗಳ ಹಿಂದೆ ತಮ್ಮ ಪಾಲನ್ನು ತೆಗೆದುಕೊಂಡು ಬೇರೆಯಾಗಿದ್ದರು ಎಂದರೆ ನನಗೆ ಗೊತ್ತಿಲ್ಲ. ಸಕ್ರಿ ಪರಸಪ್ಪನ ಮಗನ ಹೆಸರು ಹನುಮಂತಪ್ಪ ಎಂದರೆ ಸರಿ. ದಿಃ04.06.1975 ರಂದು 2 ನೇ ಪ್ರತಿವಾದಿ ಸರ್ವೇ ನಂ. 251 ರಲ್ಲಿ ಒಟ್ಟು ವಿಸ್ತೀರ್ಣ 23 ಸೆಂಟ್ಸ್ ನಲ್ಲಿ ಪೂರ್ವ ಪಶ್ಚಿಮ 32 ಮಳ ಉತ್ತರ ದಕ್ಷಿಣ 36 ಮಳವನ್ನು ಸಕ್ರಿ ಪರಸಪ್ಪನ ಮಗನಾದ ಹನುಮಂತಪ್ಪನಿಂದ ಖರೀದಿ ಮಾಡಿದ್ದರು ಎಂದರೆ ನನಗೆ ಗೊತ್ತಿಲ್ಲ. ಖರೀದಿ ಮಾಡಿದ ದಿನದಿಂದ 2 ನೇ ಪ್ರತಿವಾದಿ ಮನೆಯನ್ನು ಕಟ್ಟಿಸಿಕೊಂಡು ದಾವಾ ಆಸ್ತಿಯಲ್ಲಿ ವಾಸ ಇರುವನು ಎಂದರೆ ಸರಿಯಲ್ಲ. ಆತನು ಪಂಚಾಯತ್‌ನಲ್ಲಿ ಖಾತವನ್ನು ಮಾಡಿಸಿಕೊಡಿರುವನು ಎಂದರೆ ನನಗೆ ಗೊತ್ತಿಲ್ಲ. ಅದರ ಡೋರ್ ನಂ.834/1 ಎಂದು ಇರುವುದು ಎಂದರೆ ನನಗೆ ಗೊತ್ತಿಲ್ಲ. ಆತನು ಕಂದಾಯ ಪಾವತಿಯನ್ನು ಮಾಡುತ್ತಿರುವನು ಎಂದರೆ ಸರಿಯಲ್ಲ.

ದಾವಾ ಆಸ್ತಿಯಲ್ಲಿ ಮೂಲವಾದಿ ಅಂಜಿನಪ್ಪನ ಮನೆ, 2 ನೇ ವಾದಿ ಜಯಪ್ಪನ ಮನೆ ಹಾಗೂ ಪ್ರತಿವಾದಿಗಳ ಮನೆ ಇರುವುದು ಎಂದರೆ ಸರಿಯಲ್ಲ. ದಾವಾ ಆಸ್ತಿಯಲ್ಲಿ 2 ನೇ ವಾದಿಯ ಮನೆ ಇರುವುದು ಎಂದರೆ ಸರಿ. ಅದರ ಡೋರ್ ನಂ. 834/2 ಎಂದರೆ

ನನಗೆ ಗೊತ್ತಿಲ್ಲ. ಅದರ ಚೆಕ್ಕು ಬಂದಿ ನನಗೆ ಗೊತ್ತಿರುವುದಿಲ್ಲ. 2 ನೇ ವಾದಿಯ ಪಶ್ಚಿಮ ದಿಕ್ಕಿಗೆ 2 ನೇ ಪ್ರತಿವಾದಿಯ ಜಾಗ ಇದೆ ಎಂದರೆ ಸರಿಯಲ್ಲ. 2 ನೇ ಪ್ರತಿವಾದಿಯು ಖರೀದಿಸಿದ ಆಸ್ತಿಯ ಪೂರ್ವಕ್ಕೆ ಸಕ್ರಿ ಗಂಗಪ್ಪನ ಮಗ ಫಕೀರಪ್ಪನ ಖಣ, ಪಶ್ಚಿಮಕ್ಕೆ ಫಕೀರಪ್ಪನ ಮಗ ಹನುಮಂತಪ್ಪನ ಖಣ, ಉತ್ತರಕ್ಕೆ ಹೊನ್ನೆಮ್ಮನವರ ಗೋಣೆಪ್ಪನ ಖಣ ಹಾಗೂ ದಕ್ಷಿಣಕ್ಕೆ ತೆಲಿಗಿ ಪೋಲಿಸ್ ಠಾಣೆ ಇರುವುದು ಎಂದರೆ ಸರಿ.

ಈಗ ದಾವಾ ಆಸ್ತಿಯ ಪೈಕಿ ಪೂರ್ವ ಪಶ್ಚಿಮ 32 ಮಳ ಉತ್ತರ ದಕ್ಷಿಣ 36 ಮಳ ಇದು 2 ನೇ ಪ್ರತಿವಾದಿಯ ಹೆಂಡತಿಯ ಹೆಸರಿನಲ್ಲಿ ಇರುವುದು ಎಂದರೆ ಸುಳ್ಳು. ನಾನು 1 ನೇ ವಾದಿಯ ಪತ್ನಿಯಾಗಿರುವುದಿಲ್ಲ ಹಾಗೂ ದಾವಾ ಆಸ್ತಿಗೂ ನನಗೂ ಸಂಬಂಧ ಇರುವುದಿಲ್ಲ ಎಂದರೆ ಸರಿಯಲ್ಲ. ನಾನು ತಹಸಿಲ್ದಾರರಿಂದ ದೃಢೀಕರಿಸಲ್ಪಟ್ಟ ವಂಶವೃಕ್ಷವನ್ನು ಹಾಜರುಪಡಿಸಿರುವುದಿಲ್ಲ ಎಂದರೆ ಸರಿಯಲ್ಲ. ದಾವಾ ಆಸ್ತಿ ಅಂದರೆ 23 ಸೆಂಟ್ಸ್ ನ ಮೇಲೆ ಯಾವುದೇ ಅಧಿಕಾರ ಇರುವುದಿಲ್ಲ ಎಂದರೆ ಸರಿಯಲ್ಲ. ಪ್ರತಿವಾದಿಯರಿಗೆ ಸಂಬಂಧಿಸಿದ ಆಸ್ತಿಯನ್ನು ಕಬಳಿಸಲು ಅಂಜಿನಪ್ಪನ ಹೆಂಡತಿ ಎಂದು ಸುಳ್ಳು ಹೇಳಿಕೊಂಡು ಸುಳ್ಳು ಪ್ರಮಾಣವನ್ನು ಸಲ್ಲಿಸಿ ಸುಳ್ಳು ಸಾಕ್ಷಿಯನ್ನು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. 1975 ರಿಂದ ಇಲ್ಲಿಯವರೆಗೂ ದಾವಾ ಆಸ್ತಿಯ ಪೈಕಿ ಪೂರ್ವ ಪಶ್ಚಿಮ 32 ಮಳ ಉತ್ತರ ದಕ್ಷಿಣ 36 ಮಳ 2 ನೇ ಪ್ರತಿವಾದಿಯ ಸ್ವಾಧೀನದಲ್ಲಿರುವುದು ಎಂದರೆ ಸರಿಯಲ್ಲ.

**ಪಾಟೀ ಸವಾಲು 3 ನೇ ಪ್ರತಿವಾದಿ ಪರ ವಕೀಲರವರಿಂದಃ**

ದಾವೆಯ ಕುರಿತು ನನಗೆ ಹೆಚ್ಚಿನ ಮಾಹಿತಿ ಇರುವುದಿಲ್ಲ. ಆದರೆ ನನ್ನ ಗಂಡ ತೀರಿಕೊಂಡ ಕಾರಣ ನಾನು ಸಾಕ್ಷಿ ನುಡಿಯುತ್ತಿದ್ದೇನೆ. ಈ ದಾವೆಯನ್ನು ನಾನು ಹೊಳೆಯಪ್ಪ, ಶಿವರಾಮಪ್ಪ ಮತ್ತು ಮನ್ನಾಸಾಬ್ ರವರ ಮೇಲೆ ಹಾಕಿರುವೆನು. ಈ ದಾವಾ ಆಸ್ತಿಗೆ ಸಂಬಂಧಿಸಿದಂತೆ ನನ್ನ ಗಂಡ ಮಾಡಿರುವ ವ್ಯವಹಾರದ ಕುರಿತು ನನಗೆ ಮಾಹಿತಿ ಇರುವುದಿಲ್ಲ. ಮನ್ನಾಸಾಬ್‌ಗೂ ದಾವಾ ಆಸ್ತಿಗೂ ಏನು ಸಂಬಂಧ ಇರುವುದು ಎಂದು ನನಗೆ ಗೊತ್ತಿರುವುದಿಲ್ಲ. ಮನ್ನಾಸಾಬರನ್ನು ದಾವೆಯಲ್ಲಿ ಏಕೆ ಸೇರಿಸಲಾಗಿದೆ ಎಂದು ನನಗೆ ಗೊತ್ತಿಲ್ಲ. ಸಕ್ರಿ ಸಣ್ಣ ಬಸಪ್ಪ ನನಗೆ ಮಾವನಾಗಬೇಕು. ಅವರಿಗೆ ಹನುಮಂತಪ್ಪ ಎಂಬ ಮಗನಿರುವನು ಎಂದರೆ ಸರಿ. 1975 ರಲ್ಲಿ ಎಸ್ ಹೆಚ್ ಅಹಮದುಲ್ಲಾ ಎನ್ನುವವರಿಗೆ ದಾವಾ ಆಸ್ತಿಯನ್ನು ಸಕ್ರಿ ಸಣ್ಣ ಬಸಪ್ಪನ ಮಗನಾದ ಹನುಮಪ್ಪನವರು ಮಾರಾಟ ಮಾಡಿರುವರು ಎಂದರೆ ನನಗೆ ಗೊತ್ತಿಲ್ಲ. 1975 ರಲ್ಲಿ ಡೋರ್ ನಂ.40 ಮತ್ತು ವಾರ್ಡ್ ನಂ.8 ಎಂದು ಆ ಕಾಲಕ್ಕೆ ನೀಡಲಾಗಿತ್ತು ಎಂದರೆ ನನಗೆ ಗೊತ್ತಿಲ್ಲ. ಹೆಚ್ ಎಸ್ ಅಹಮದುಲ್ಲಾ ಇವರು ಅಂದಿನಿಂದ ತೆರಿಗೆ ಪಾವತಿ ಮಾಡುತ್ತಾ ಬಂದಿದ್ದರು ಎಂದರೆ ನನಗೆ ಗೊತ್ತಿಲ್ಲ. ತದನಂತರ 1996 ರಲ್ಲಿ ಅಹಮದುಲ್ಲಾರವರಿಗೆ ಅನಾನುಕೂಲವಾಗಿದ್ದರಿಂದ

ಅವರು ತಾನು ಖರೀದಿ ಮಾಡಿದ ಆಸ್ತಿಯನ್ನು ರೂ.20,000/-ಕ್ಕೆ ತೆಲಿಗಿ ಗ್ರಾಮದ ಸುನ್ನಿ ಜಮಾಯತ್ ನ ಜಾಮಿಯ ಮಸೀದಿನ ಮುತ್ತುವಲ್ಲಿ ಇವರಿಗೆ ನೀಡಿರುತ್ತಾರೆ ಎಂದರೆ ಸರಿಯಲ್ಲ. ನಂತರ ಸದರಿ ಸುನ್ನಿ ಜಮಾಯತ್ ನ ಜಾಮಿಯ ಮಸೀದಿನ ಮುತ್ತುವಲ್ಲಿ ಇವರ ಹೆಸರಿಗೆ ಕಂದಾಯ ದಾಖಲೆಗಳು ಆಗಿರುತ್ತವೆ ಎಂದರೆ ಸರಿಯಲ್ಲ. ಅಂದಿನಿಂದ ಇಂದಿನವರೆಗೂ ಸದರಿಯವರು ಅಂದರೆ 3 ನೇ ಪ್ರತಿವಾದಿಯವರು ಮಾಲೀಕರಾಗಿದ್ದು ಸ್ವಾಧೀನದಲ್ಲಿದ್ದರು ಎಂದರೆ ಸರಿಯಲ್ಲ. ಅವರು ತೆರಿಗೆಯನ್ನು ಕೂಡ ಪಂಚಾಯತ್ ಕಟ್ಟುತ್ತಿದ್ದರು ಎಂದರೆ ಸರಿಯಲ್ಲ.

3 ನೇ ಪ್ರತಿವಾದಿ ಪಂಚಾಯತ್ ನಿಂದ ಪರವಾನಿಗೆಯನ್ನು ಪಡೆದು ಕಟ್ಟಡವನ್ನು ಕಟ್ಟಲು ಹೋದಾಗ ನಾವು ಅಡ್ಡಪಡಿಸಿದ್ದೇವೆ ಎಂದರೆ ಸರಿಯಲ್ಲ. ಆ ಕುರಿತು 3 ನೇ ಪ್ರತಿವಾದಿ ಪೋಲಿಸರಿಗೆ ದೂರು ನೀಡಿದ್ದರು ಎಂದರೆ ನನಗೆ ಗೊತ್ತಿಲ್ಲ. ನಾವು ಠಾಣೆಗೆ ಹೋಗಿ ಇನ್ನೂ ತಕರಾರು ಮಾಡುವುದಿಲ್ಲ ಎಂದು ಬರೆದುಕೊಟ್ಟು ಬಂದಿದ್ದೇವೆ ಎಂದರೆ ಸರಿಯಲ್ಲ. 3 ನೇ ಪ್ರತಿವಾದಿ ಖರೀದಿ ಮಾಡಿದ ಕುರಿತು ಮಾಹಿತಿ ಇದ್ದರೂ ಸಹಿತ ದಾವಾ ಆಸ್ತಿಯನ್ನು ಕಬಳಿಸಲು ಸುಳ್ಳು ಸಾಕ್ಷಿಯನ್ನು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ದಾವಾ ಆಸ್ತಿ ಈಗ ಖಾಲಿ ಜಾಗವಾಗಿರುವುದು ಎಂದರೆ ಸರಿ. ದಾವಾ ಆಸ್ತಿ ಈಗ 3 ನೇ ಪ್ರತಿವಾದಿಯ ಸ್ವಾಧೀನದಲ್ಲಿ ಇದ್ದರು ಕೂಡ ನಾನು ಇದ್ದೇನೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

3 ನೇ ಪ್ರತಿವಾದಿಯ ಹೆಸರಿಗೆ ಪಂಚಾಯತ್ ರವರು ಈ ಸ್ವತ್ತು ದಾಖಲೆ ನೀಡಿರುವರು ಎಂದರೆ ಸರಿಯಲ್ಲ. ನನಗೆ ದಾವಾ ಆಸ್ತಿಯ ಮೇಲೆ ಮಾಲೀಕತ್ವ ಇರುವುದಿಲ್ಲ ಎಂದರೆ ಸರಿಯಲ್ಲ. ನಾನು ಸ್ವಾಧೀನದಲ್ಲಿರುವುದಿಲ್ಲ ಎಂದರೆ ಸರಿಯಲ್ಲ. ಸುಳ್ಳು ಸಾಕ್ಷಿಯನ್ನು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆ ಇಲ್ಲ**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ನನ್ನ ಉಕ್ತ ಲೇಖನಕ್ಕೆ ಬೆರಳಚ್ಚು ಮಾಡಲಾಯಿತು.)

**ಓ ಹೇ ಕೇ ಸರಿಯಿದೆ.**

**ಸಿವಿಲ್ ನ್ಯಾಯಾಧೀಶರು ಮತ್ತು**

**ಜೆ.ಎಂ.ಎಫ್.ಸಿ. ಹರಪನಹಳ್ಳಿ**